ಮೈಸೂರ ಗೆಜೆಟ್ಟು.

ನಂ. 18 ಸರ್ಕಾರದಿಂದ ಘಾಯಿಷ್ ಆದ್ದು. ಸನ್ 1885.

ಬೆಂಗಳೂರು, ಶನಿವಾರ, ಮೇ ತಾ|| 2, ಸನ್ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇವಕ್ಕೆ ಪೇರೆಮಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ಮತ್ತು ಇನಾಂ ಸೂಪರ್ಡೆಂಟೆಂಡರು, ಕಾಂಟ್ರೋಲರವರು, ಪಬ್ಲಿಕ್ ವರ್ಕಸ್ ಆಫೀಸರಿಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರ್ಲ್‌ವರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್ಡೆಂಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಜ್ಞೆಗಳು ಮತ್ತು ರಿಜಿಸ್ಟ್ರೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 16ನೇ ಏಪ್ರೆಲ್ 1885.

ನಂ. 9.—ಶ್ರೀಮನ್ ಮಹಾರಾಜಾ ಸರಕಾರದವರು ಈ ವಿಷಯದಲ್ಲಿ ಹಾಲಿ ಇರುವ ತವಾ ಆದೇಶಗಳ ರದ್ದೀಯಾತ್‌ನಿಂದ ಇದರಿಂದ ಕಂಡ ನಿಬಂಧನೆಗಳನುಸರಿಸಿ ಛಾಪಾಳದ ಕೋರ್ಟು ಫೀ ಸ್ಟ್ಯಾಂಪುಗಳ ಕಿಮ್ಮತ್ತನ್ನು ರೀಫಂಡು ಯಾನೆ ವಾಪಸು ಮಾಡತಕ್ಕದ್ದೆಂದು ಹುಕ್ಕುಂ ಮಾಡುತ್ತಾರೆ:—

ಯಾವನಾದರೂ, ತನಿಗೆ ತಾತ್ಕಾಲಿಕ ಉಪಯೋಗವಿಲ್ಲದ ಅಥವಾ ಕೆಟ್ಟುಹೋದ ಯಾ ಉದ್ದೇಶಿಸಲ್ಪಟ್ಟ ಕಾರ್ಯಕ್ಕೂ ಸ್ಥಳಕ್ಕೂ ಅನರ್ಹವಾಗಿಯೂ ಅನುಪಯುಕ್ತವಾಗಿಯೂ ಮಾಡಲ್ಪಟ್ಟ ಛಾಪಾಳದ ಕೋರ್ಟ್‌ಫೀಸ್ ಸ್ಟ್ಯಾಂಪುಗಳನ್ನು ಇಟ್ಟುಕೊಂಡಿದ್ದರೆ, ಅಂಥಾ ಮನುಷ್ಯನು ಸದರೀ ಸ್ಟ್ಯಾಂಪುಗಳು ರದ್ದುಮಾಡಲ್ಪಡಬೇಕೆಂದು ಡೆಪ್ಯೂಟಿ ಕಮ್ಮಿಷನರಲ್ಲಿ ಅರ್ಜಿಕೊಟ್ಟು ಅವುಗಳನ್ನು ವಪ್ಪಿಸಿ, ಅವುಗಳು ವಾಸ್ತ

ವೈವಾಗಿ ಉಪಯೋಗದ ಬಗ್ಯೆ ಕೊಂಡುಕೊಳ್ಳಲ್ಪಟ್ಟುತ್ತೆಂತಲೂ, ಅವುಗಳಿಗೆ ಪೂರಾ ಕಿಮ್ಮತ್ತು ಅವನು ಪಾವತೀ ಮಾಡಿಥಾನೆಂತಲೂ, ದು ತ್ತು ಆವು ಪಪ್ಪಸಲ್ಪಡಹವನಕ್ಕೆ ಪೂರ್ವ ಆರು ತಿಂಗಳೊಳಗಾಗಿ ಹಾಗೆ ಕೊಂಡುಕೊಳ್ಳಲ್ಪಟ್ಟುತೆಂತಲೂ, ಯಾ ಕೆಟ್ಟು ಹೋಯಿತೆಂತಲೂ ಯೂ ಅನುಪಯುಕ್ತವಾಗಿ ಮಾಡಲ್ಪಟ್ಟಿತೆಂತಲೂ ಡಿಪ್ಯೂಟಿ ಕಮ್ಮಿಷನರವರಿಗೆ ತೃಪ್ತಿಕರವಾಗಿ ರುಜು ಮಾಡಿಕೊಟ್ಟ ಮೇಲೆ, ಅವರು ಅಂಥಾ ಸ್ಟ್ಯಾಂಪಿನ ಕಿಮ್ಮತಿನಲ್ಲಿ ರೂಪಾಯಿಗೆ ಬಂದು ಆಣೆ ಮೇರಗೆ ವಜಾ ಜಾತಾ ಬಾಕಿ ಮೊಬಲಗನ್ನು ನಗದಾಗಿ ಅವನಿಗೆ ಪಾವಸು ಕೊಡತಕ್ಕದ್ದು.

2. ಗವರ್ನಮೆಂಟಿನವರು, ವಿಕೇಷ ಸಂದರ್ಭಗಳಲ್ಲಿಯೂ ಮತ್ತು ಡಿಪ್ಯೂಟಿ ಕಮ್ಮಿಷನರವರ ವಿಚಾರಣೆಯ ಮೇಲೂ ಸ್ಟ್ಯಾಂಪು ಕೊಂಡುಕೊಳ್ಳಲ್ಪಟ್ಟ ಅಥವಾ ಕೆಟ್ಟು ಹೋದ ಯಾ ಅನುಪಯುಕ್ತವಾಗಿ ಮಾಡಲ್ಪಟ್ಟ ತಾರೀಖು ಲಾಗಾಯಿತು ಒಂದು ವರುಷದ ಒಳಗಾ ಗಿ ಅರ್ಜಿ ಬಂದರೆ ಅವರು ಅದರ ಕಿಮ್ಮತ್ತನ್ನು ವಾಪಸು ಕೊಡಬಹುದು.

3. ಲೈಸೆನ್ಸು ಪಡೆದ ವೆಂಡರನು ತನ್ನ ಲೈಸೆನ್ಸನ್ನು ಮಪ್ಪಿಸಿ ಬಿಟ್ಟರೆ ಯಾ ಅವನು ಮೃತಪಟ್ಟರೆ, ಡಿಪ್ಯೂಟಿ ಕಮ್ಮಿಷನರವರು, ತಮಗೆ ಅರ್ಜಿಯ ಸಂಗತಿಗಳು ನ್ಯಾಯವೆಂದು ತೋರಿಬಂದಲ್ಲಿ ತಮ್ಮ ಸ್ಟೋರಿಗೆ ವಾಪಸ್ ಮಾಡಲ್ಪಟ್ಟ ಕೆಟ್ಟು ಹೋಗದೆ ಇರುವ ಯಾ ಅನುಪಯುಕ್ತವಾಗಿ ಮಾಡಲ್ಪಟ್ಟ ಸ್ಟ್ಯಾಂಪುಗಳ ಕಿಮ್ಮತ್ತನ್ನು ರೂಪಾಯಿಗೆ 1 ಆಣೆ ಮೇರಿಗೆ ವಜಾಮಾಡಿ ಸಂದರ್ಭಾನುಸಾರ ಲೈಸೆನ್ಸಿ ವೆಂಡರಿಗಾದರೂ ಅಥವಾ ಅವನ ಪ್ರತಿನಿಧಿಗಳಿಗಾದರೂ ತಮ್ಮ ಯಚ್ಚಾರ್ಯೀ ಮೇಲೆ ವಾಪಸು ಮಾಡಬಹುದು, ಅಥವಾ ಅವರುಗಳಿಗೆ ಬದ ಲಾಗಿ ಜೇರೆ ಕಿಮ್ಮತ್ತುಗಳುಳ್ಳ ಸ್ಟ್ಯಾಂಪುಗಳನ್ನು ಕೊಡಬಹುದು.

ತಾರೀಖು 17ನೇ ಏಪ್ರೆಲ್ 1885.

ನಂ. 12.—ಇದರಿಂದ ಸಮಸ್ತ ಜನಗಳ ತಿಳಿವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ವೈ ೀ ತುರುಕರಹಳ್ಳಿ ಯಂಬ ಗ್ರಾಮದ ಹೆಸರನ್ನು ಮಲ್ಲಿಕಾರ್ಜುನಪುರ ಎಂಬದಾಗಿ ಬದಲಾಯಿಸಿ ಯಿರುತ್ತೆ.

ನಂ. 13.—ಸ್ರ್ 1885ನೇ ಇಸವಿ ಜನವರೀ 29ನೇ ಮತ್ತು ಮಿನ 215ನೇ ನಂಬರುಳ್ಳ ಈ ಆಫೀಸು ಇನ್ಸ್ಟ್ರಾಕ್ಷರ್ ನಾಮೆಯಲ್ಲಿ ನಮೂದಾದ, ಅಸಿಸ್ಟೆಂಟ್ ಕಮ್ಮಿಷನ್ನರ್‌ಗಳು, ಮುನಿಸಿಫರುಗಳು, ಅಮಲ್ದಾರ್‌ರುಗಳು ಮತ್ತು ಡಿಪ್ಯೂಟಿ ಅಮಲ್ದಾರಗಳು ಇವರುಗಳ ಮೊ ಕರರಾಶಿ ಬಗ್ಯೆ ಪರೀಕ್ಷೆಗಳನ್ನು ವಿಧಿಸುವ ರೂಲ್ಸಿನ 10ನೇ ಪ್ಯಾರಾದಲ್ಲಿನ ಇದರಡಿ ಕಂಡ ಬದಲಾವಣೆಯು ಸರ್ವರ ತಿಳಿವಳಿಕೆ ಬಗ್ಯೆ ಫಾ ಯಿಷ್ ಮಾಡಲ್ಪಟ್ಟಿರುತ್ತೆ:—

ಪ್ಯಾರಾ 10.—ಐದು ವರುಷಗಳಿಗೆ ಕಮ್ಮಿ ಯಿಲ್ಲದೆ ಸರ್ಕಾರ ನವಕರಿಯಲ್ಲಿರುವ ಅಥವಾ ಮೂಹಿಯಾನಾ 15 ರೂಪಾಯಿಗೆ ಕಮ್ಮಿ ಯಿಲ್ಲದ ತಲಬುಳುಳ್ಳ ಒಂದು ನವಕರಿಯನ್ನು ಸರ್ಕಾರದಲ್ಲಿ ಉಂಟಾಗಿರುವ ಯಾವ ಮನುಷ್ಯನಾಗಲಿ, ಅವನು ತನ್ನ ಕೆಲಸವನ್ನು ತೃಪ್ತಿ ಕರವಾಗಿ ಮಾಡಿರುತ್ತಾನೆಂಬದಕ್ಕೆ ತನ್ನ ಮೇಲ್ಪಟ್ಟ ಹುದ್ದೆದಾರನಿಂದ ಒಂದು ಸರಟಿಫಿಕೇಟು ಪಡೆದ ತರುವಾಯ, ಮೇಲೆ ಹೇಳಲ್ಪಟ್ಟ ಯಾ ವ ಪರೀಕ್ಷೆಯನ್ನಾಗಲಿ ಕೊಡುವ ಬಗ್ಯೆ ಅರ್ಹನಾಗಿರತಕ್ಕದ್ದು.

2. ಪರೀಕ್ಷೆಕೊಡತಕ್ಕವರು, ಮುಂದಿನ ವರುಷದ ಲಾಗಾಯಿತು ಪರೀಕ್ಷೆಗೆ ಬರಲು ಅಪ್ಪಣೆ ಬಗ್ಯೆ ತನ್ನ ದರಖಾಸ್ತುಗಳನ್ನು ಪ್ರಸಕ್ತವಾದ ರೂಲ್ಸಿನ 11ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ವಿದ್ಯಾ ಇಲಾಖೆ ಸೆಕ್ರಿಟೇರಿಯವರಿಗೆ ಕೊಡುವದಕ್ಕೆ ಬದಲಾಗಿ ಯಗ್ಜಾಮಿನರ್‌ಗಳ ಬೋರ್ಡ್ ಸೆಕ್ರಿಟೇರಿಯವರಿಗೆ ಕಳುಹಿಸತಕ್ಕದ್ದು.

ಉದಕಮಂಡಲ, ತಾರೀಖು 17ನೇ ಏಪ್ರೆಲ್ 1885.

ನಂ. 14.—ಇದರಿಂದ ನೋಟೀಸು ಕೊಡುವದೇನಂದರೆ, ಬೆಂಗಳೂರು ಯಗ್ಜಿಕ್ಯೂಟೀವ್ ಟ್ಯಾಸ್ ಪೋರ್ಟು ಆಫೀಸರರಿಗೆ ದಂಡಿನ ನೌಕರೀ ಬಗ್ಯೆ ಭೋಯೀರುಗಳು ಬೇಕಾಗಿರುತ್ತೆ. ಸದರೀ ಜನಗಳಿಗೆ ಬೊಕರರಾತಿ ಲಾಗಾಯಿತು ಭತ್ತಾ ಪಾಯಿ ಮಾಹೆಯಾನಾ 9 ರೂಪಾ ಯಿ ಮೇರಿಗೆ ಕೊಡಲ್ಪಡುವಲ್ಲದೆ, ಫ್ರಾಕ್ಟಿಯರ್ ಯಾನೆ ಸರಹದ್ದು ದಾಟಿದ ಮೇಲೆ ಬಾಮವಾದ ಉಡುಪು ಸಹ ಕೊಡಲ್ಪಡುವದು.

ನಂ. 15.—ಇದರಿಂದನೋಟೀಸು ಕೊಡುವದೇನಂದರೆ, ಬೆಂಗಳೂರು ಯಗ್ಜಿಕ್ಯೂಟೀವ್ ಟ್ಯಾಸ್‌ಪೋರ್ಟು ಆಫೀಸರರು ದಂಡಿನ ನೌಕರೀ ಬಗ್ಯೆ ಉದ್ದೇಸಲ್ಪಟ್ಟ ಬೋಜೆ ಯತ್ತುಗಳ ಬಾಕರಿಗಾಗಿ ಜನಗಳನ್ನು ಬೊಕರಕ್ಕಾಮುತ್ತಾರೆ. ಸದರೀ ಜನಗಳಿಗೆ ಬೊಕರರಾತಿ ಲಾಗಾಯಿತು ಭತ್ತಾ ಪಾಯಿ ಮಾಹೆಯಾನಾ 9 ರೂಪಾಯಿ ಮೇರೆ ಕೊಡಲ್ಪಡುವದಲ್ಲದೆ, ಫ್ರಾಕ್ಟಿಯರ್ ಯಾನೆ ಸರಹದ್ದು ದಾಟಿದ ತರುವಾಯ ಬಾಮವಾದ ಉಡುಪು ಸಹ ಕೊಡಲ್ಪಡುವದು.

ತಾರೀಖು 20ನೇ ಏಪ್ರೆಲ್ 1885.

ನಂ. 16.—ಬಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಾವರ್ಗಿಯು ಮಂಜೂರ್ಮಾಡಲ್ಪಟ್ಟಿರುವ ಗ್ರಾಮಗಳನ್ನು ತೋ ರಿಸುವ ಇದಕ್ಕೆ ಲಗತ್ತಾಗಿರುವ ತಖ್ತೆಯು ಸರ್ವಜನಗಳ ತಿಳಿವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

ನಲ್ಲಿರುವ ಗ್ರಾಮಗಳು ರಿರುವ ತಾಲ್ಲೂಕು.	ನಂಬರ್.	ಗ್ರಾಮಗಳು.	3ನೇ ಮದ್ದಿನಲ್ಲಿರುವ ಗ್ರಾಮಗಳು ಯಾವ ತಾಲ್ಲೂಕಿಗೆ ವರ್ಗ ಮಾಡಲ್ಪಡಬೇಕೆಂದು ಉದ್ದೇಶಿಸಲ್ಪಟ್ಟಿದೆಯೋ ಆ ತಾಲ್ಲೂಕು.
1	2	3	4
ಕುಪ್ಪ . .	1	ನೂಗನಹಳ್ಳಿ	ಚನ್ನರಾಯಪಟ್ಟಣ
	2	ಸೊಣ್ಣೇನಹಳ್ಳಿ	ನಾಗಮಂಗಲ
	3	ಜುಮೇನಹಳ್ಳಿ	
ಮಂಗಲ . .	4	ಚಿಕ್ಕಸಮುದ್ರ	ಅತ್ತಿಸುಬ್ಬ
	5	ಪಟ್ಟದಪುರ	
ಮಡತೊರೆ . .	6	ಕಟ್ಟಿಕ್ಯಾತನಹಳ್ಳಿ	ಡಿಟೋ
	7	ಬೆಲ್ಲೂರು	
	8	ಕಟಿಪುರ	

ತಾರೀಖು 21ನೇ ಏಪ್ರಿಲ್ 1885.

ನಂ. 17.—ಶಿವಮೊಗ್ಗಾ ಸಿವಿಲ್ ಸರ್ಜರಾದ ಮೆ॥ ಐ. ಸಾಸ್ಮೆರ್ಯವರು ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುವದಲ್ಲದೆ, ಸದರೀ ಜೈಲ್ ಸರಹದ್ದಿನೊಳಗೆ ನಡಿಸಲ್ಪಟ್ಟ ತಕಸೀರ್‌ಗಳ ವಿಷಯದಲ್ಲಿ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 42ನೇ ಸೆಕ್ಷನ್ ಪ್ರಕಾರ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರ ಸುದಾ ಕೊಡಲ್ಪಟ್ಟಿರುತ್ತಾರೆ.

ನಂ. 18.—ಕೋಲಾರ ತಾಲ್ಲೂಕು ಅಮಲ್‌ದಾರ್ ಮೆ॥ ಜೆ. ಜೆ. ನಾರ್ತ್ಯಪವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು, 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ನಾರ್ತ್ಯಪವರ ಗೈರಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿಗೂ ಕೋಲಾರ ಡೆಪ್ಯುಟಿ ಕಮ್ಮಿಷನರ ಆಫೀಸ್ ರಿವಿಸ್ಯೂ ಹೆಡ್ ಮುನಸ್ಸಿ ಮಾಧವರಾಯರು ಕೋಲಾರ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 19.—ಇವರಡೀಕಂಡ ಅಮಲ್‌ದಾರ್ರ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತೆ:—

1. ಶ್ವೇತಾದ್ರಿಅಯ್ಯಂಗಾರ್ರು, ಆನೇಕಲ್ಲಿನಿಂದ ಮದ್ದಗಿರಿ ತಾಲ್ಲೂಕಿಗೆ.
2. ಸೈದ್ ಅಮಿರ ಹಸ್ರೆಯವರು, ಮದ್ದಗಿರಿಯಿಂದ ಆನೇಕಲ್ಲು ತಾಲ್ಲೂಕಿಗೆ.

ತಾರೀಖು 22ನೇ ಏಪ್ರಿಲ್ 1885.

ನಂ. 20.—ಸ್ಯ 1885ನೇ ಇಸವಿ ಫಿಬ್ರವರೀ 27ನೇ ಮುಕ್ತುಂ 182ನೇ ನಂಬರುಳ್ಳ ಈ ಆಫೀಸ್ ಜಸ್ಟಿಫಾರ್ನಾಮೆಯಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರಿಗೆ ಕೊಟ್ಟಿದ್ದ 20 ದಿವಸಗಳ ಪ್ರಿವಿಲೀಜ್ ರಜಾವನ್ನ ಸಿವಿಲ್ ಲೀವ್ ಕೋಡ್ಡಿನ 130ನೇ ಸೆಕ್ಷನ್ ಮೇರಿಗೆ ಸ್ವಂತ ಕೆಲಸದ ರಜಾವಾಗಿ ಬದಲುಯಿಸಿ ಮತ್ತು 2 ತಿಂಗಳ ವರಿಗೂ ಜಾಸ್ತೀ ಮಾಡಿರುತ್ತೆ.

ನಂ. 21.—ಚನ್ನಗಿರಿ ತಾಲ್ಲೂಕು ಅಮಲ್‌ದಾರ್ ನರಸಿಂಹನವರಿಗೆ 1885ನೇ ಇಸವಿ ಫಿಬ್ರವರೀ 16ನೇ ಮುಕ್ತುಂ ಲಾಗಾಯತು 27 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಏಪ್ರಿಲ್ 1885.

ನಂ. 22.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಬ್ದೀಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡಿದಾರರಿಂದ ಸರಕಾರಕ್ಕೆ ಸೆಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ಗ್ರಾಮವು ವೈತ್ತಿವಾರಾಗಿ ಇದರಡೀಕಂಡ ತಬ್ದೀಯಲ್ಲಿ ನಮೂದಿರುವ ಸ್ಥಳದಲ್ಲೂ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪರುವಾಗಿ, ಉಳಿಕೆ ಯಾವದೂ ಇಲ್ಲದೆ ವೈತ್ತಿಗಳು ಜಡ ದರಬಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು ಕಂದಾಯದ ಬಾಕಿ ವಸೂಲಾಗಬೇಕಾದ ವೃತ್ತಿಗಳು ಕೃಷಿಮತಃ ಹರಾಜು ಮಾಡಲ್ಪಟ್ಟು, ಅವುಗ ಬೇಕಾದ ಮೊಬಲಗು ಪೂರ್ತಿಯಾಗಿ ಹುಟ್ಟದೆ ಯಿರುವ ಪಕ್ಷಕ್ಕೆ ಪೂರಾ ಗ್ರಾಮವು ಹರಾಜ್ ಮಾಡಲ್ಪಡುವದು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡ ಯದ ಮೊಬಲಗ ಪೈಕೀ ಬಾಕೀಯನ್ನು 'ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಖಾವತೀ ಮಾಡದೇ ಕ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಜೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಖಾವತೆ ಜಮಿನಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀ ಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಪ ವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿ

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಿಡ್ಡೀ ಯಾ ಇತರ ಖರ್ಚುಗಳು ದೇಖರೇಖ್ ಕಂದಾಯದ ಬಾಕೀ ಮೊಬಲಗನ್ನ ಹಾಜರ್ ಮಾಡಿದರೆ, ಹರಾಜು ಮುವ್ತಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾ ಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಖಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋದಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲ್‌ನಲ್ಲುಗಲಿ ಅಂದಾಜು ಬೀಜವರೀ ವಿಷಯವ ಲ್ಲುಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟುಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳ ಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವ್ವೋ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಬೆಂಗಳೂರು.	ಬೆಂಗಳೂರು.	ಜ್ಞಾನಾ.	ಅರದೇಹಳ್ಳಿ	ವೆಲ್ಲಭಶಾಸ್ತ್ರಿ, ಇತರ 58 ಮಂದಿ	ಖಂ.ಕೂ. ಪ. 66 0 15	ರೂ. ಆ. ಪೈ. 640 15 3	ರೂ. ಆ. ಪೈ. 615 0 0	ರೂ. ಆ. ಪೈ. 401 13 2	ಮೇ ತಾರೀಖು 30 ರಲ್ಲು ಅಮಲ್ದಾರ್ರ ರೂಬರು ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ.

ತಾರೀಖು 23ನೇ ಏಪ್ರೆಲ್ 1885.

ನಂ. 23.—ಫಾರೆಸ್ಟ್ ಅಕ್ಕೌಂಟಿಸ್ ಮೆ|| ಬಾಪೂರಾಯರು, ಮಾಹೆ ಮಜಕೂರ್ 8ನೇ ವರ್ಕುಂ ಮಧ್ಯಾನ್ಹಾತ್ಪರ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್ ಬಾರ್ಜ್‌ನ್ನ ಫಾರೆಸ್ಟ್ ಅ|| ಕ್ವಾಸರವೇಟರ್ ಮೆ|| ಕೆ. ನಾರಾಯಣರಾಯರಿಗೆ ವಪ್ಪಿಸಿ ಯಿರುತ್ತಾರೆ.

ತಾರೀಖು 21ನೇ ಏಪ್ರೆಲ್ 1885.

ನಂ. 24.—ಬೆಂಗಳೂರಲ್ಲಿಯ ಗವರ್ಮೆಂಟ್ ಬೊಟಾನಿಕಲ್ ಗಾರ್ಡನಗಳ ಸೂಪರಿಂಟೆಂಡೆಂಟರಾದ ಮೆ|| ಜೆ. ಕ್ಯಾಮಿರ್ರ್ ಯವರು ಬೆಂಗಳೂರು ಗವರ್ಮೆಂಟ್ ಮ್ಯೂಜಿಯಂ ಸೂಪರ್ಟೆಂಡೆಂಟರಾಗಿ ಸಹ ಇರತಕ್ಕದ್ದು.

ತಾರೀಖು 24ನೇ ಏಪ್ರೆಲ್ 1885.

ನಂ. 25.—ಪೋಲೀಸ್ ಇಲಾಖೆಯಲ್ಲಿ ದಿವಾನರವರ ಸೆಕ್ರಿಟೇರಿಯರಾದ ಕೇಪ್ಟನ್ ಎ. ಹೆಚ್. ಮೌಂಟಿಯರ್ ಯವರು ಡಿಪ್ಯೂಟಿ ಕಮ್ಮಿಷನರಾಗಿ ಮೊಕರರ್ ಮಾಡಲ್ಪಟ್ಟು, ಬೆಂಗಳೂರ್ಗ ಡಿಸ್ಟ್ರಿಕ್ಟ್ಗೆ ನಿಯಮಿಸಲ್ಪಟ್ಟಿರುತ್ತಾರೆ.

ಡಿಪ್ಯೂಟಿ ಕಮ್ಮಿಷನರಾದ ಮೆ|| ಜಿ. ಯಫ್. ಮೈಕಲ್ಜಾಯವರು ಬೆಂಗಳೂರ್ಗಿಯಿಂದ ಕಡೂರು ಡಿಸ್ಟ್ರಿಕ್ಟ್ಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಕಡೂರು ಡಿಸ್ಟ್ರಿಕ್ಟ್ ಅಫಿಷಿಯೇಟಿಂಗ್ ಡಿಪ್ಯೂಟಿ ಕಮ್ಮಿಷನರಾದ ಖಾ ಬಹದೂರು ಮಹಮದ್ ಅಲ್ಲಿಯವರು ಅವರ ಕೆಲಸವಾದ ಬೆಂಗಳೂರ ಟವ್ನ ಮಾಜಿಸ್ಟ್ರೇಟ್ ಉದ್ಯೋಗಕ್ಕೆ ವಾಪಸು ಹೋಗತಕ್ಕದ್ದು.

ನಂ. 26.—ಕೋಲಾರ ಡಿ| ಡಿಪ್ಯೂಟಿ ಕಮ್ಮಿಷನರ್ ಮೆ|| ಸಿ. ಸುಬ್ಬರಾಯರಿಗೆ ಮಾಹೆ ಮಜಕೂರ್ 27ನೇ ಮಕ್ತುಂ ಲಾಗಾಯ್ತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು 6 ದಿವಸಗಳ ಪ್ರಿವಿಲೀಪ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 27.—ಬ್ರಿಗೇಡ್ ಸರ್ಜನ್ ಜೆ. ಹೆಡಿರರ್ಸ್, ಯಂ. ಡಿ., ರವರು 1885ನೇ ಇಸವಿ ಮಾರ್ಚಿ 22ನೇ ಮಕ್ತುಂ ಲಾಗಾಯ್ತು ಮೈಸೂರು ಗವರ್ನಮೆಂಟಿಗೆ ಸೀನಿಯರ್ ಸರ್ಜನ್ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೆ|| ಹೆಚ್. ಜಿಪ್. ಸ್ಪಾರ್ಕ್ಸ್ರವರು ಅಜವಾಯಿಷಿ ತರೀಕೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ಟೆಂಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರೆಲ್ 1685.

ಕ್ಯಾಂಪ್ ನಂ. 65.—ಇದರಿಂದ ನೋಟೀಸ್ ಕೊಡುವದೇನಂದರೆ, ಬೆಂಗಳೂರು ಯಕ್ಟ್ರಕ್ಯೂಟಿವ ಟ್ರಾನ್ಸ್ಪೋರ್ಟ್ ಆಫೀಸರರು ಬಂಡಿನ ನವಕರಿ ಬಗ್ಗೆ ಉದ್ದೇಸಿಸಲ್ಪಟ್ಟ ತಟ್ಟುಗಳ ವಾಸ್ತವಾಗಿ ಜನಗಳನ್ನು ಮೊಕರರ ಮಾಡುತ್ತಾರೆ. ಸದರೀ ಜನಗಳು ಪ್ರಾಯಕ್ ವಾಗಿ ಫ್ರಾಟಿಯರ್ಯಾನೆ ಸನದ್ದಿನೊಳಗೆ ಬಂಡಿನ ನವಕರಿಬಗ್ಗೆ ಬೇಕಾಗಿರುತ್ತಾರೆ, ಮತ್ತು ಲಂಘಾ ಜನಗಳು ಯುದ್ಧಮುಖಕ್ಕೆ ಹೋದಾಗ ಬ್ರಿಟಿಷ್ ಸರಕಾರವರ ಹುಕ್ಕುಂ ಮೇರೆಗೆ ಅನುಗೆ ಸಲ್ಲುವ ಇತರ ಅಲ್ಲೌರ್ಯನ್ಸುಗಳು ಖಾಯಮಿ ಮಾಹೆಯೂನಾ ರೂ. 10—8—0 ಮೇರೆಗೆ ಕೊಡಲ್ಪಡುವದು.

ತಾರೀಖು 12ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾರ್ಥರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್ಗಳನ್ನು ಕಳುಹಿಸತಕದ್ದು

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾರ್ಥರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಹುಕ್ಕುಂ ಬರೋಜೀಪ್,

ಆರ್. ವಿಜಯೀಂದ್ರರಾವ್,

ಸೆಕ್ರಿಟೇರಿ.